G20

ವಸುಧೈವ ಕುಟುಂಬಕಮ್
ONE EARTH • ONE FAMILY • ONE FUTURE

# ಕರ್ನಾಟಕ ಸರ್ಕಾರ

**ಹಿರಿಯ ಭೂವಿಜ್ಞಾನಿ, ಜಿಲ್ಲಾ ಅಂತರ್ಜಲ ಕಛೇರಿ, ಅಂತರ್ಜಲ ನಿರ್ದೇಶನಾಲಯ, 2ನೇ ಮಹಡಿ, ಪಂಚಾಯತ್ ರಾಜ್ ಇಂಜಿನೀಯರಿಂಗ್ ಕಟ್ಟಡ, ಚಿಕ್ಕಮಗಳೂರು-577102**

**E-Mail: sgzpckm@gmail.com** **ದೂರವಾಣಿ / Tele -: 08262-295758**


ಸಂಖ್ಯೆ:ಹಿಭೂವಿ/ಜಿಅಂಕಚೆ/ನಡವಳಿ/2024-25/ ದಿನಾಂಕ:27.03.2025

ಇವರಿಗೆ,

1. ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು.
2. ಕಾರ್ಯಪಾಲಕ ಅಭಿಯಂತರರು, ಮೆಸ್ಕಾಂ, ಚಿಕ್ಕಮಗಳೂರು/ಕಡೂರು/ಕೊಪ್ಪ.
3. ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಚಿಕ್ಕಮಗಳೂರು.
4. ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಚಿಕ್ಕಮಗಳೂರು.
5. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಮಗಳೂರು.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಚಿಕ್ಕಮಗಳೂರು/ತರೀಕೆರೆ.
7. ಜಿಲ್ಲಾ ವ್ಯವಸ್ಥಾಪಕರು, ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಚಿಕ್ಕಮಗಳೂರು.
8. ಜಿಲ್ಲಾ ವ್ಯವಸ್ಥಾಪಕರು, ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಚಿಕ್ಕಮಗಳೂರು.
9. ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ, ಚಿಕ್ಕಮಗಳೂರು.

ಮಾನ್ಯರೇ,

ವಿಷಯ: ಜಿಲ್ಲಾ ಅಂತರ್ಜಲ ಸಮಿತಿ ಸಭೆಯ ನಡವಳಿಯಂತೆ ಕ್ರಮಕೈಗೊಳ್ಳುವ ಕುರಿತು.

ಉಲ್ಲೇಖ: 1. ಮಾನ್ಯ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು ಕರ್ನಾಟಕ ಅಂತರ್ಜಲ ಸುತ್ತೋಲೆ ಸಂಖ್ಯೆ: KGWA/GW/NOC/05/2023-24/1741, ದಿನಾಂಕ:24.11.2023.

2. ದಿನಾಂಕ:16.12.2023 ರಂದು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಜಿಲ್ಲಾ ಅಂತರ್ಜಲ ಸಮಿತಿ ಸಭೆಯ ನಡವಳಿ.
3. ದಿನಾಂಕ:20.01.2025 ರಂದು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಜಿಲ್ಲಾ ಅಂತರ್ಜಲ ಸಮಿತಿ ಸಭೆಯ ನಡವಳಿ.
4. ಈ ಕಛೇರಿ ಪತ್ರ ಸಂಖ್ಯೆ:ಹಿಭೂವಿ/ಜಿಅಂಕಚೆ/ಜಿ.ಅಂ.ಸ.ಸ.ನ/2023-24,437-453, ದಿನಾಂಕ:02.01.2024.

******

ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿನ ಅಂತರ್ಜಲದ ಅತಿಬಳಕೆಯನ್ನು ನಿಯಂತ್ರಿಸಿ ಅಂತರ್ಜಲ ಸಂರಕ್ಷಣೆ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ ಅಧಿನಿಯಮ 2011 ಮತ್ತು ನಿಯಮಾವಳಿ 2012 ನ್ನು ಸರ್ಕಾರವು ಜಾರಿಗೆ ತಂದಿರುತ್ತದೆ.

ಸದರಿ ಅಧಿನಿಯಮದ ಪ್ರಕರಣ 13 ರಂತೆ ರಾಜ್ಯದಲ್ಲಿ ಕೊಳವೆ ಬಾವಿ ಕೊರೆಯುವ ಕಾರ್ಯ ನಿರ್ವಹಿಸುವ ರಿಗ್ ಸಂಸ್ಥೆ/ಮಾಲೀಕರು ಕರ್ನಾಟಕ ಅಂತರ್ಜಲ ಪ್ರಾಧಿಕಾರದಲ್ಲಿ ನೋಂದಾಯಿಸಿ ನಮೂನೆ-7ಎ ಪಡೆಯುವುದು ಕಡ್ಡಾಯವಾಗಿರುತ್ತದೆ.

2.,

ಸರ್ಕಾರದ ವಿವಿಧ ಇಲಾಖೆಗಳ ಮೂಲಕ ಮತ್ತು ವಿವಿಧ ಯೋಜನೆಯಡಿ ಹಮ್ಮಿಕೊಳ್ಳಲಾದ ಕೊಳವೆ ಬಾವಿ ಕೊರೆಯಿಸುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಕುರಿತು ಕರೆಯಲಾಗುವ ಟೆಂಡರ್‌ಗಳಲ್ಲಿ ಭಾಗವಹಿಸುವ ಟೆಂಡರ್‌ದಾರರು ಕಡ್ಡಾಯವಾಗಿ ಕರ್ನಾಟಕ ಅಂತರ್ಜಲ ಪ್ರಾಧಿಕಾರದಲ್ಲಿ ನೋಂದಣಿಗೊಂಡು ಮಾನ್ಯ ಇರುವ ನಮೂನೆ–7ಎ ಹೊಂದಿರಬೇಕಾಗಿರುತ್ತದೆ. ಆದ್ಯಾಗ್ಯೂ ನಮೂನೆ–7ಎ ಹೊಂದಿಲ್ಲದೇ ಇರುವ ರಿಗ್ ಯಂತ್ರಗಳನ್ನು ಹೊಂದಿರುವ ಸಂಸ್ಥೆಗಳು/ಮಾಲೀಕರಿಗೆ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡುತ್ತಿರುವುದು ಹಾಗೂ ಅಂತಹ ಟೆಂಡರ್‌ದಾರರಿಗೆ ಕೊಳವೆ ಬಾವಿ ಕೊರೆಯುವ ಟೆಂಡರ್ ನೀಡುತ್ತಿರುವುದು ಕರ್ನಾಟಕ ಅಂತರ್ಜಲ ಅಧಿನಿಯಮ 2011 ಪ್ರಕರಣ 13ರ ಉಲ್ಲಂಘನೆಯಾಗುತ್ತದೆ.

ಸದರಿ ವಿಷಯ ಕುರಿತು ಉಲ್ಲೇಖ (1) ರಂತೆ ಈಗಾಗಲೇ ಎಲ್ಲಾ ಇಲಾಖೆಗಳಿಗೆ ಸುತ್ತೋಲೆ ಕಳುಹಿಸಿದ್ದು, ಉಲ್ಲೇಖ (2) & (3) ರ ಜಿಲ್ಲಾ ಅಂತರ್ಜಲ ಸಮಿತಿ ಸಭೆಯಲ್ಲಿ ಮಾನ್ಯ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳು ಜಿಲ್ಲಾ ಅಂತರ್ಜಲ ಸಮಿತಿ, ಚಿಕ್ಕಮಗಳೂರು ಇವರು ಉಲ್ಲೇಖ (1) ರಂತೆ ಕ್ರಮವಹಿಸಲು ಸೂಚಿಸಿರುತ್ತಾರೆ. ನಡವಳಿಯ ಪ್ರತಿಯನ್ನು ಉಲ್ಲೇಖ (4) ರಂತೆ ಎಲ್ಲಾ ಇಲಾಖೆಗಳಿಗೆ ಕಳುಹಿಸಲಾಗಿದೆ. ಸದರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಉಲ್ಲೇಖ (1) ರ ಸುತ್ತೋಲೆಯಂತೆ ಕ್ರಮ ಕೈಗೊಳ್ಳಲು ಕೋರಿದೆ ಹಾಗೂ ತಮ್ಮ ಅಧೀನ ಕಛೇರಿಗಳಿಗೂ ಸೂಕ್ತ ನಿರ್ದೇಶನ ನೀಡಲು ಕೋರಿದೆ.

ಅಡಕ: 1. ಸುತ್ತೋಲೆ
2. ಸಭೆಯ ನಡವಳಿ

ತಮ್ಮ ವಿಶ್ವಾಸಿ,
Nal N.R
ಹಿರಿಯ ಭೂವಿಜ್ಞಾನಿ,
ಜಿಲ್ಲಾ ಅಂತರ್ಜಲ ಕಛೇರಿ,
ಅಂತರ್ಜಲ ನಿರ್ದೇಶನಾಲಯ,
ಚಿಕ್ಕಮಗಳೂರು.